**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 65/2010**

**ಸಾಕ್ಷಿಗೆ ದಿನಾಂಕಃ 13.10.2020 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಮ | ಪಿ.ಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | : | ಗಂಗಬೋವಿ | ಸಿ.ಡಬ್ಲ್ಯೂ-18 |
| ವಯಸ್ಸು | : | 55 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಹುಣಸೆಕುಪ್ಪೆ | |

<u>ಮುಖ್ಯ ವಿಚಾರಣೆಃ ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿರುವುದಿಲ್ಲ. ಈ ಕೇಸಿನ ಆರೋಪಿಗಳ ಪರಿಚಯ ಸಹ ಇರುವುದಿಲ್ಲ. ಆತನನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

<u>ಪಾಟೀಸವಾಲುಃಎಪಿಪಿ ರವರಿಂದಃ</u>

ದಿನಾಂಕ 03.09.2009 ರಂದು ಬೆಳಗ್ಗೆ 9.30 ಗಂಟೆಗೆ ನಾನು ನಮ್ಮ ಊರಿನ ಪಾಸಾ.7 ರವರ ಅಂಗಡಿಯ ಬಳಿ ಇದ್ದಾಗ ಬೆಟ್ಟದ ಬೀಡು ಕೋರೆ ಕಡೆಯಿಂದ ಬಾವಲಿ ಕಡೆಗೆ ಕೆಎ-09-ಎ-2868 ಲಾರಿಯಲ್ಲಿ ಜಲ್ಲಿಯನ್ನು ತುಂಬಿಕೊಂಡು ಮೈಸೂರು-ಮಾನಂದವಾಡಿ ರಸ್ತೆಯಲ್ಲಿ ಬರುತ್ತಿದ್ದಾಗ ಅದರ ಚಾಲಕನಾದ ಆರೋಪಿ ಅದನ್ನು ಅತಿವೇಗ ಮತ್ತು ಅಜಾಗರುಕತೆಯಿಂದ ಓಡಿಸಿಕೊಂಡು ಬಂದು, ಹುಣಸೆಕುಪ್ಪೆ ಗ್ರಾಮದಲ್ಲಿ ಚಾಸಾ.4 ರವರ ಮನೆಯ ಮುಂದು ಲಾರಿಯನ್ನು ರಸ್ತೆಯ ಎಡಕ್ಕೆ ಫುಟ್ ಬಾತ್

ಗೆ ಬಿಟ್ಟ ಪರಿಣಾಮ ಲಾರಿಯು ಎಡಕ್ಕೆ ಪಲ್ಟಿ ಹೊಡೆದು ಲಾರಿಯ ಕ್ಲೀನರ್ ಬಸವರಾಜಗೌಂಡಿ ಲಾರಿಯ ಕೆಳಗೆ ಸಿಕ್ಕಿ ತೀವ್ರ ಸ್ವರೂಪದ ಗಾಯಾವಾಗಿ ಗಾಯಗೊಂಡಿರುತ್ತಾನೆ. ಆತನನ್ನು ಕೂಡಲೇ ನಾವು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿಕೊಟ್ಟಿದ್ದರು ಸಹ ಆತ ಚಿಕಿತ್ತೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ ಎಂದು ಈಗ ಓದಿ ಕೇಳಿಸಿಕೊಂಡ ನಿಪಿ.9 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಏನೂ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ